
# ಅಧ್ಯಾತ್ಮ ಪ್ರಹಸನ

**ಸ**ಮಸ್ಯೆಯ ಮೂಲವಿರುವುದು ನಮ್ಮೊಳಗೇ. ಒಬ್ಬ ಪ್ರಸಿದ್ಧ ಧಾರ್ಮಿಕ ವ್ಯಕ್ತಿಯಿದ್ದ. ಅವನಿಗೆ ತುಂಬ ವಯಸ್ಸಾಗಿತ್ತು. ಅನೇಕ ಖಾಯಿಲೆಗಳಿಂದ ನರಳುತ್ತ ಈಗ ಮರಣಶಯ್ಯೆಯಲ್ಲಿ ಇದ್ದಾನೆ. ಅವನ ಆತ್ಮವನ್ನು ಸ್ವರ್ಗಕ್ಕೆ ಕಳಿಸುವುದಕ್ಕೋಸ್ಕರ ಪಾದ್ರಿಯು ಬಂದು ಅವನ ಮಂಚದ ಪಕ್ಕದಲ್ಲಿ ನಿಂತಿದ್ದಾನೆ. ರೋಗಿಯು ಅತ್ಯಂತ ಸಂಕಟದಿಂದ, ಮಾತನಾಡುವುದಕ್ಕೂ ಆಗದೆ ತಾನೇನೋ ಬರೆಯಬೇಕೆಂದು ಸೂಚಿಸುತ್ತಾನೆ. ಕೂಡಲೇ ಪಾದ್ರಿಯು ಕಾಗದ ಪೆನ್ನುಗಳನ್ನು ಅವನಿಗೆ ಕೊಡುತ್ತಾನೆ. ರೋಗಿಯು ತುಂಬ ಕಷ್ಟದಿಂದ ಕಾಗದದ ಮೇಲೆ ಏನೋ ಗೀಚಿ ಪಾದ್ರಿಗೆ ಕೊಡುತ್ತಾನೆ. ಅದು ವೃದ್ಧನ ಕೊನೆಯ ಸಂದೇಶವಿರಬೇಕೆಂದು ಭಾವಿಸಿ ಪಾದ್ರಿಯು ಅದನ್ನು ಈಗ ಓದುವುದು ಬೇಡ ಆಮೇಲೆ ಓದೋಣವೆಂದು ಜೇಬಿಗೆ ಹಾಕಿಕೊಳ್ಳುತ್ತಾನೆ. ವೃದ್ಧನು ಸ್ವಲ್ಪ ಹೊತ್ತಿನ ನಂತರ ಉಸಿರುಕಟ್ಟಿ ಪ್ರಾಣಬಿಡುತ್ತಾನೆ. ಶವಸಂಸ್ಕಾರ ಮುಗಿದ ಮೇಲೆ ಶ್ರದ್ಧಾಂಜಲಿಯ ಕಾರ್ಯಕ್ರಮ. ಅನೇಕ ಜನ ನೆರೆದಿದ್ದಾರೆ. ಅದೇ ಪಾದ್ರಿಯು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ವೃದ್ಧನ ಕೊನೆಯ ಸಂದೇಶವನ್ನು ಓದಿ ಹೇಳಬೇಕೆಂದು ಚೀಟಿಯನ್ನು ಜೇಬಿನಿಂದ ತೆಗೆದನು. ಅದರಲ್ಲಿ ಬರೆದಿರುವುದನ್ನು ಓದಿ ಪಾದ್ರಿಯ ಮುಖ ಸಣ್ಣಗಾಯಿತು. ಅದರಲ್ಲಿ ಹೀಗೆ ಬರೆದಿತ್ತು: **"ಫಾದರ್, ನೀವು ನನ್ನ ಆಮ್ಲಜನಕದ ಟ್ಯೂಬಿನ ಮೇಲೆ ನಿಂತಿದ್ದೀರಿ. ಸ್ವಲ್ಪ ಆ ಕಡೆ ಸರಿಯುತ್ತೀರಾ?"**



ಹೀಗೆ ಎಷ್ಟೋ ದುರ್ಘಟನೆಗಳಿಗೆ, ನಮಗೇ ಅರಿವಿಲ್ಲದೆ ನಾವು ಕಾರಣರಾಗಿರುತ್ತೇವೆ. ಆದ್ದರಿಂದ ಅಂತರಂಗದಲ್ಲಿ ಅರಿವಿನ ಬೆಳಕು ಮೂಡಬೇಕು. ಅದಕ್ಕಾಗಿ ನಾವು ಅಂತರ್ಮುಖಿಗಳಾಗಬೇಕು. ನಮ್ಮ ಕಡೆಗೆ ಗಮನ ಹರಿಸಬೇಕು, **"ಪರಚಿಂತೆ ಎಮಗೇಕೆ ಅಯ್ಯಾ, ಎಮ್ಮಯ ಚಿಂತೆ ಎಮಗೇ ಸಾಲದೆ"** ಎಂದು ಭಾವಿಸುವುದು ಸ್ವಾರ್ಥತೆ–ಯೂ ಅಲ್ಲ, ಸ್ವಕೇಂದ್ರಿತರಾಗಿರುವುದೂ (self-centred) ಅಲ್ಲ. ಸ್ವಾರ್ಥತೆಯೆಂದರೆ ತನಗಾಗಿ ಬಾಹ್ಯವಿಷಯಗಳನ್ನು ಬಯಸುವುದು ಮತ್ತು ಅವುಗಳನ್ನು ಪಡೆಯಲು, ಇತರರನ್ನು ಕಡೆಗಣಿಸಿ, ಪ್ರಯತ್ನ ಪಡುವುದು – ಸನ್ಮಾರ್ಗದಲ್ಲಾಗಲಿ, ದುರ್ಮಾರ್ಗದಲ್ಲಾಗಲಿ, ಸ್ವಕೇಂದ್ರಿತರಾಗಿರುವುದೆಂದರೆ ಯಾವಾಗಲೂ ತನ್ನ ಕಷ್ಟ ಸಮಸ್ಯೆಗಳ ಬಗ್ಗೆಯೇ ಚಿಂತಿಸುತ್ತಿರುವುದು, ಇತರರಿಂದ ತನಗಾದ ಅನ್ಯಾಯ, ತೊಂದರೆಗಳ ಬಗ್ಗೆಯೇ ಮರುಗುತ್ತಿರುವುದು, ತನ್ನಂತೆಯೇ ಇತರರೂ ಸುಖದುಃಖಗಳನ್ನು ಅನುಭವಿಸುತ್ತಿರುವುದರ ಬಗ್ಗೆ ಚಿಂತಿಸಲು ಅಸಮರ್ಥರಾಗಿರುವುದು ಇತ್ಯಾದಿ. ಇವರು ಸ್ವಾರ್ಥಿಗಳಿಗಿಂತ ಕೇಡು. ಇಂಥವರು ತಾವೂ ಸುಖವನ್ನು ಅನುಭವಿಸುವುದಿಲ್ಲ, ಇತರರನ್ನೂ ಸುಖದಿಂದಿರಲು ಬಿಡುವುದಿಲ್ಲ. ಎಲ್ಲರೂ ಇವರ ಸುಖಕ್ಕಾಗಿ ಶ್ರಮಿಸಬೇಕು, ಆದರೆ ಇಂಥವರನ್ನು ಎಂದೂ ಸುಖದಿಂದಿರಿಸಲು ಆಗುವುದಿಲ್ಲ. ಎಲ್ಲರ ಗಮನ ತಮ್ಮ ಕಡೆ ಇರಬೇಕೆಂಬುದೊಂದೇ ಇವರ ಬಯಕೆ.

ಸ್ವಾರ್ಥಿಯು ಹೊಟ್ಟೆ ತುಂಬಿದರೆ ಸ್ವಲ್ಪ ತೃಪ್ತನಾಗುತ್ತಾನೆ. ಆದರೆ ಸ್ವಕೇಂದ್ರಿತ ವ್ಯಕ್ತಿಯ ಹೊಟ್ಟೆ ತುಂಬುವುದೇ ಇಲ್ಲ. ಸ್ವಾರ್ಥಿಯು ವಿಷಯಸುಖವನ್ನು ಅನುಭವಿಸಿ ಆನಂದಿಸುತ್ತಾನೆ. ಆದರೆ ಸ್ವಕೇಂದ್ರಿತನು ಸುಖಪಡುವ ಸಾಮರ್ಥ್ಯವನ್ನೇ ಕಳೆದುಕೊಂಡಿರುತ್ತಾನೆ. ಸ್ವಾರ್ಥಿಯಾದವನಿಗೆ ಹಣ, ಅಧಿಕಾರ, ಸ್ಥಾನಮಾನಾದಿಗಳು ತೃಪ್ತಿಯನ್ನು ನೀಡಬಹುದು. ಆದರೆ ಸ್ವಕೇಂದ್ರಿತನಿಗೆ ಅತೃಪ್ತಿಯೇ ತೃಪ್ತಿ. ತನಗಿರುವ, ಇಲ್ಲದಿರುವ ತೊಂದರೆ ತಾಪತ್ರಯಗಳನ್ನು ಚಿಂತಿಸುವುದರಲ್ಲೇ ಅಥವಾ ಇತರರಿಗೆ ಹೇಳಿಕೊಳ್ಳುವುದರಲ್ಲಿಯೇ (ಯಾರಾದರೂ ದುರದೃಷ್ಟದ ವ್ಯಕ್ತಿ ಸಿಕ್ಕಿದರೆ – ಈಗಿನ ಕಾಲದಲ್ಲಿ ಸಿಕ್ಕುವುದು ಕಷ್ಟ, ಅನ್ನಿ) ತೃಪ್ತಿ. ಇವರನ್ನೇ ತಲೆ ತಿನ್ನುವ ಪಾರ್ಟಿ (T.T.P.) ಎಂದು ಕರೆಯುವುದು. ಇಂಥವರೇ ಹೆಚ್ಚಿನ ಸಂಖ್ಯೆಯಲ್ಲಿರುವಾಗ **ಪರಸ್ಪರಂ ಭಾವಯಂತಃ** – ಒಬ್ಬರಿಗೊಬ್ಬರು ಹೇಳಿಕೊಂಡು ಕಾಲ ಕಳೆಯಬೇಕಾಗುತ್ತದೆ. ಸ್ವಾಮಿ ವಿವೇಕಾನಂದರು ಇಂಥವರನ್ನು ಕುರಿತೇ, 'ಮನೆಯಿಂದ ಹೊರಗೆ ಬರಬೇಡಿ' ಎಂದು ಆದೇಶ ನೀಡುತ್ತಾರೆ. ಆದರೆ ಕೇಳುವವರಾರು! ಅವರು ಹರಳೆಣ್ಣೆಯ ಮುಖವನ್ನು ಪ್ರದರ್ಶಿಸುತ್ತ ತಮ್ಮ ನಿರಾಸೆಯನ್ನು ಹಂಚಿದಷ್ಟೂ ಅದು ಜಾಸ್ತಿಯಾಗುತ್ತದೆ. ಹಾಸ್ಯೋತ್ಸವಕ್ಕೆ ಹೋದರೂ ಅವರಿಗೆ ಸುಖ ಸಿಕ್ಕುವುದಿಲ್ಲ! ಏಕೆಂದರೆ ಹಾಸ್ಯೋತ್ಸವದಲ್ಲಿ ಎಲ್ಲರನ್ನೂ ನಗಿಸುವವರೇ ಒಳಗೆ ಸಂಕಟದಿಂದ ನರಳುತ್ತಿರುತ್ತಾರೆ.

(**ಬರಹ:** ಸ್ವಾಮಿ ನಿತ್ಯಸ್ಥಾನಂದ)